## ಮುನ್ನೇನ ನೋಂತೆನೊ ಪತಿಯಗಲಿ ಘನ ಕಾನನಕೆ ಗುರಿಯಾದೆ

ದಮಯಂತಿಯು ಹಾಗೆ ಸಾಗುತ್ತ, ತೇಜಸ್ವಿ, ತಪಸ್ವಿಗಳ ಸಮೂಹ ಒಂದನ್ನು ಕಂಡಳು. ಕಣ್ಣೀರು ಸುರಿಸುತ್ತ ಬಂದ ಅವಳನ್ನು ಆ ಕರುಣಾಳು ಮುನಿಗಳು ಕೇಳಿದರು,

‘ತಾಯಿ ನೀನಾರು? ಇಲ್ಲಿಗೆ ಬಂದ ಕಾರಣವೇನು?’

‘ಪೂಜ್ಯರೇ, ನಾನು ಪುಣ್ಯಹೀನೆ. ನನಗಾದ ನಷ್ಟವನ್ನು ಏನೆಂದು ಹೇಳಲಿ. ನಳ ಚಕ್ರವರ್ತಿಯನ್ನು ನೀವು ಬಲ್ಲಿರೇ? ಆ ನರೇಂದ್ರನ ಪತ್ನಿ ನಾನು? ಹಿಂದಿನ ಜನ್ಮದಲ್ಲಿ ಯಾವ ವ್ರತ ಕೈಗೊಂಡೆನೊ ಈ ಜನ್ಮದಲ್ಲಿ ಪತಿಯನ್ನು ಅಗಲಿ ಕಾಡು ಪಾಲಾದೆ’ ಎಂದು ಹೇಳಿ ದಮಯಂತಿ ನಿಟ್ಟುಸಿರುಬಿಡುತ್ತ ಮಾತು ಮುಂದುವರೆಸಿ, ‘ನನ್ನ ಪತಿಯು ರಾಜ್ಯವನ್ನು ಜೂಜಿನಲ್ಲಿ ಪುಷ್ಕರನಿಗೆ ಸೋತನು. ಸತ್ಯ ಮಾರ್ಗಿಯಾದ ಅವನು ಪಣದ ಪ್ರಕಾರ ವನವಾಸ ಕೈಕೊಂಡನು. ಇಲ್ಲಿ ನನ್ನನ್ನು ಅಗಲಿ ಹೋದನು. ಪತಿಯನ್ನು ಕಾಣದೆ ಭೀತಿಯಿಂದ ಶಕ್ತಿಗುಂದಿದೆ. ಈಗ ತಮ್ಮ ಚರಣ ದರ್ಶನವಾಯಿತು. ಭೂತ ದಯೆಯುಳ್ಳ ತಾವು ನನ್ನನ್ನು ಕಾಪಾಡಿ’ ಎಂದು ಪ್ರಾರ್ಥಿಸಿದಳು.

ದಮಯಂತಿಯ ಕರುಣಾಜನಿಕ ಸ್ಥಿತಿಗೆ ಅವರ ಅಂತಃಕರಣ ಕರಗಿತು. ಅವರು ‘ತಾಯೆ, ಕೋಪಗೊಂಡು ಕಂಗೆಡಬೇಡ. ನಿನಗೆ ನಿನ್ನ ಗಂಡ ಮತ್ತು ಮಕ್ಕಳು,  ರಾಜ್ಯ ಸಿರಿ ಮತ್ತೆ ದೊರಕುವುದು. ಇದನ್ನು ನಾವು ಯೋಗಧ್ಯಾನದಿಂದ ತಿಳಿದೆವು. ಧೈರ್ಯಗುಂದ ಬೇಡ’ ಎಂದು ಹೇಳಿ ಅದೃಶ್ಯರಾದರು.

ಅಕಟಕಟ! ಇದು ಕನಸಿನ ರೀತಿ ಆಯಿತಲ್ಲ! ಮುನಿಗಳು

